ಕೀರ್ತಿ, ಹಣ ಇಲ್ಲದೆ ಹೆಚ್ಚಿನ ಪರಿಶ್ರಮ ಬೇಡುವ ಈ ಕೆಲಸದಿಂದ ಮಹಿಳೆಯರು ಸಹಜವಾಗಿಯೇ ದೂರ ಉಳಿಯುತ್ತಾರೆ. ನಮ್ಮ ಕೆಲಸ ಗುರುತಿಸಲ್ಪಟ್ಟು ಪ್ರಶಸ್ತಿಗಳು ಬರುತ್ತವೆಯಾದರೂ ನಾವು ಕಥೆ, ಕಾದಂಬರಿ, ನಾಟಕಗಳನ್ನು ಬರೆದು ಜನ ಮಾನಸದಲ್ಲಿ ಸ್ಥಾನಗಿಟ್ಟಿಸಿಕೊಳ್ಳುವ ಸೃಜನಶೀಲ ಲೇಖಕರಂತಲ್ಲ. ನಾನು ಮೊದಲೇ ಹೇಳಿದ ಹಾಗೆ ಇದು ಕೀರ್ತಿಯ ದಾರಿಯಲ್ಲ. ಆದರೆ, ಕನ್ನಡ ವಾಙ್ಮಯ ಇದರಿಂದ ಶ್ರೇಯೋಲಾಭಗಳನ್ನು ಖಂಡಿತ ಪಡೆದುಕೊಳ್ಳುತ್ತದೆ. ಅದೇ ನಮಗೆ ಧನ್ಯತೆಯನ್ನು ತಂದುಕೊಡುತ್ತದೆ.

◆ **ಯಾವುದೇ ಸಾಧಕ ಅಥವಾ ಸಾಧಕಿಯ ಬದುಕಿನಲ್ಲಿ ಅವರ ಹುಟ್ಟು, ಬೆಳವಣಿಗೆ, ಪರಿಸರ, ತಂದೆ ತಾಯಿಯರ ಪ್ರಭಾವ ಸಾಕಷ್ಟಿರುತ್ತದೆ. ಮೊದಲಿಗೆ ಆ ಕುರಿತು ಮಾತಾಡಬಹುದೆ?**

ನಾನು ಹುಟ್ಟಿದ್ದು 1953ನೇ ಇಸವಿ ಜನವರಿ 14ನೇ ತಾರೀಕಿನಂದು. ಹಾಸನ ಜಿಲ್ಲೆ, ಬೇಲೂರು ತಾಲ್ಲೂಕಿನ ಯಮಸಂಧಿಯಲ್ಲಿ. ನನ್ನ ತಂದೆ ವೈ.ಬಿ. ಚನ್ನೇಗೌಡ, ತಾಯಿ ಎಚ್.ಎಸ್. ಜಯಮ್ಮ. ಆ ಕಾಲಕ್ಕೆ ನಮ್ಮ ಕುಟುಂಬದಲ್ಲಿ ಎಲ್.ಎಸ್. ಪಾಸ್ ಮಾಡಿದ್ದ ಏಕೈಕ ಮಹಿಳೆ ನಮ್ಮ ತಾಯಿ. ಹದಿನೈದನೇ ವರ್ಷಕ್ಕೆ ಮದುವೆಯಾಗಿ ಮಕ್ಕಳಾದ ಮೇಲೆ ಎಸ್.ಎಸ್.ಎಲ್.ಸಿ ಪಾಸ್ ಮಾಡಬೇಕೆಂದು ಹಂಬಲಿಸಿ ಪರೀಕ್ಷೆ ಕಟ್ಟಿದರು. ಮೊದಲ ಪ್ರಯತ್ನಕ್ಕೆ ಪಾಸಾದರು. ಆ ಮೇಲೆ ಅವರಿಗೆ ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಸಿಕ್ಕಿತು. ನನ್ನ ತಂದೆಯವರು ಕೂಡ ಶಿಕ್ಷಕರೇ. ಯಮಸಂಧಿಯಲ್ಲಿದ್ದ ನಮ್ಮ ಕುಟುಂಬ ಸರ್ಕಾರಿ ಕೆಲಸದ ಕಾರಣಕ್ಕಾಗಿ ಬೇಲೂರಿಗೆ ವಾಸ್ತವ್ಯ ಬದಲಿಸಬೇಕಾಯಿತು. ಅವರು ಬೇಲೂರಿನ ವೈಕುಂಠ ಬೀದಿಯಲ್ಲಿ ಮನೆ ಮಾಡಿ ನೆಲೆ ನಿಂತರು. ಮೂಲತಃ ನಮ್ಮದು ಕೃಷಿ ಕುಟುಂಬವಾದರೂ ನಮ್ಮ ತಂದೆ ತಾಯಿ ಶಿಕ್ಷಕರಾಗಿದ್ದರಿಂದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಾತಾವರಣ ನಮ್ಮ ಮನೆಯಲ್ಲಿ ಇತ್ತು. ನಾನು ನನ್ನದಲ್ಲದ ಸಮುದಾಯದವರ ಜೊತೆ ಬೆಳೆದ ಕಾರಣ ಜೀವನವನ್ನು ವಿಶಾಲದೃಷ್ಟಿಯಿಂದ ನೋಡುವುದು ಸಾಧ್ಯವಾಯಿತು. ನನ್ನ ತಾಯಿಯ ಕುರಿತು ಹೇಳಬೇಕೆಂದರೆ, ಅವರು ಶಾಲಾ ಮಕ್ಕಳಿಗೆ ನಾಟಕ, ರೂಪಕ, ಹಾಡುಗಳನ್ನು ತಾವೇ ಬರೆದು ಕಲಿಸುತ್ತಿದ್ದರು. ಮದುವೆಗಳಲ್ಲಿ ಗಂಡು ಹೆಣ್ಣಿನ ಹೆಸರು ಸೇರಿಸಿ ಕವನ ರಚಿಸುವ ವಾಡಿಕೆಯೂ ಅವರಿಗಿತ್ತು.

◆ **ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಜೊತೆ ದೀರ್ಘಕಾಲ ನಿಕಟ ಸಂಪರ್ಕದಲ್ಲಿದ್ದವರು ನೀವು. ಅಲ್ಲಿರುವ ಅಪರೂಪದ ಹಸ್ತಪ್ರತಿಗಳ ಕುರಿತು ಹೇಳಬಹುದೆ? ಹಸ್ತಪ್ರತಿಗಳನ್ನು ಸಂಗ್ರಹಿಸುವ ಕ್ರಮ ಯಾವುದು?**

ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಹಸ್ತಪ್ರತಿ ಭಂಡಾರದ ಉಗಮ ಸ್ಥಾನ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಎನ್ನಬಹುದು. ಅಲ್ಲಿದ್ದ ಕನ್ನಡ ಹಸ್ತಪ್ರತಿಗಳು 1966ರಲ್ಲಿ ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಲೀನವಾದವು. ಇಲ್ಲಿ ಐದು ಸಾವಿರ ಹಸ್ತಪ್ರತಿಗಳಿವೆ. ಇವುಗಳಲ್ಲಿ ತಾಡೋಲೆ ಪ್ರತಿಗಳು, ಕಾಗದದ ಪ್ರತಿಗಳು, ಕಡತಗಳು ಇವೆ. 'ಕವಿರಾಜಮಾರ್ಗ'ದಿಂದ ಹಿಡಿದು 1944ರಲ್ಲಿದ್ದ ಹನುಮಾನ್ ವೆಂಕಟರಾಯರ ವರೆಗೆ ರಚಿತವಾದ ಗ್ರಂಥಗಳಿವೆ. ಇಲ್ಲಿನ ಹಸ್ತಪ್ರತಿಗಳಲ್ಲಿ ಕ್ರಿ.ಶ 1130ರಲ್ಲಿ ಪ್ರತಿಯಾದ 'ನಾಮ ಲಿಂಗಾನುಶಾಸನಟೀಕು' ಗ್ರಂಥವೇ ಪ್ರಾಚೀನವಾದದ್ದು. ಕ್ರಿ.ಶ 1342ರ ಪ್ರತಿಯಾದ ರನ್ನನ 'ಗದಾಯುದ್ಧ' ಹಸ್ತಪ್ರತಿ ಇದೆ. 'ಕುಮಾರವ್ಯಾಸಭಾರತ'ದ ಇಲ್ಲಿರುವ ಒಂದು ಪ್ರತಿ 1554ರಲ್ಲಿ ಪ್ರತಿ ಮಾಡಿದುದಾಗಿದೆ. ಇದರಲ್ಲಿ ಓಲೆಯ ರಂಧ್ರಕ್ಕೆ ಬೆಳ್ಳಿಕಟ್ಟು ಅಳವಡಿಸಿದೆ. ಅಲ್ಲಲ್ಲಿ ರೇಖಾ ಚಿತ್ರಗಳಿವೆ. 'ಬಸವ ಪುರಾಣ'ದ ಕಾಗದದ